ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು
1ನೇ-4ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
ಕಛೇರಿ ದೂ.22392203, ಫ್ಯಾಕ್ಸ್: 22392206/07, ಮೇಲ್:kshrc2007@gmail.com.

ಹೆಚ್.ಆರ್.ಸಂಖ್ಯೆ:ಮಾ.ಹ.ಆ. 4469/10/1/2015 (B-3) ದಿನಾಂಕ.31-8-2020
2/9/20

ಇಂದ:
ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:

ಪೊಲೀಸ್ ಇನ್ಸ್‌ಪೆಕ್ಟರ್,
ಪುಲಕೇಶಿನಗರ ಸಂಚಾರಿ ಪೊಲೀಸ್‌ಠಾಣೆ,
ಪುಲಕೇಶಿನಗರ,
ಬೆಂಗಳೂರು.

ವಿಷಯ: ಹೆಚ್.ಆರ್.ಸಿ ಸಂಖ್ಯೆ 4469/10/1/2015 (B-3)-ದೂರಿನ ಬಗ್ಗೆ.

****

ಪ್ರಕರಣವನ್ನು ದಿನಾಂಕ.26.08.2020 ರಂದು ಆಯೋಗದ ಮುಂದೆ ಮಂಡಿಸಿದಾಗ, ಆಯೋಗವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ

## ಆದೇಶ

**Public property usurped and misused for parking" reported in Bangalore Mirror dated 17.08.2015 is registered as a suo-motu complaint by the Commission.**

**As per the report, half of the road below the coxtown flyover on wheels road has been illegally occupied for parking four wheelers using this public property into their private parking space . Neither the Traffic Police nor the BBMP have taken action to prevent such illegal parking on public property.**

ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಸಿ.ವಿ.ರಾಮನ್ ನಗರ ಉಪವಿಭಾಗ, ಬಿಬಿಎಂಪಿ, ಕಸ್ತೂರಿನಗರ, ಬೆಂಗಳೂರು ಅವರು ಸ್ಥಳವನ್ನು ಪರಿಶೀಲಿಸಿ, ಸದರಿ ವಿಷಯವು ಸಂಚಾರಿ ಪೊಲೀಸ್ ಠಾಣೆ, ಪುಲಿಕೇಶಿನಗರ ವ್ಯಾಪ್ತಿಗೆ ಬರುವುದರಿಂದ, ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಚಾರಿ ಪೊಲೀಸ್ ಠಾಣೆ, ಪುಲಕೇಶಿನಗರ ರವರಿಗೆ ದಿನಾಂಕ.04.03.2020ರ ಪತ್ರದಲ್ಲಿ ಕೋರಲಾಗಿತ್ತು. ಆದರೆ ಪುಲಕೇಶಿನಗರ ಸಂಚಾರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ದಿನಾಂಕ.12.03.2020 ರಂದು ಸ್ಥಳ ಪರಿಶೀಲನೆಯ ಸಮಯದಲ್ಲಿ ಸದರಿ ಸ್ಥಳದಲ್ಲಿ **'Grace Jubilate Deo Apartment association is officially authorized to maintain and control this area by order BBMP, KPA/CVR/EST/112/2018-19'** ರಂದು ನಾಮಫಲಕ ಅಳವಡಿಸಲಾಗಿದ್ದು, ಸದರಿ ಸ್ಥಳದಲ್ಲಿ ಬಿಬಿಎಂಪಿ ಕಛೇರಿಯಿಂದ ಅನುಮತಿ ಪಡೆಯಲಾಗಿದೆ ಎಂದು ಭಾವಿಸಿ ಹಾಗೂ ಸಾರ್ವಜನಿಕರ ಅಭಿಪ್ರಾಯವನ್ನು ಪಡೆದು ಪಾಲಿಕೆಯ ವಿರುದ್ಧ ಪ್ರಕರಣ ದಾಖಲಾಗಿರುವುದರಿಂದ ಸದರಿ ಪ್ರಕರಣದ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಕವೇ ಪತ್ರ ವ್ಯವಹರಿಸಲು ತಿಳಿಸಿರುತ್ತಾರೆ.

ಅದರಂತೆ ಸದರಿ ಸ್ಥಳವನ್ನು ಜಂಟಿಯಾಗಿ ಮತ್ತೊಮ್ಮೆ ಪರಿಶೀಲಿಸಲಾಗಿದ್ದು, ಈ ಹಿಂದೆ ಸದರಿ ನಾಮಫಲಕದಲ್ಲಿ **Traffic Police station order Number and dated** ಎಂದು ನಮೂದಿಸಿ ಅದನ್ನು ಅಳಿಸಲಾಗಿರುವುದು ಕಂಡು ಬಂದಿರುತ್ತದೆ. ಪ್ರಸ್ತುತ **by order BBMP, KPA/CVR/EST/112/2018-19** ಎಂದು ನಕಲು ಸಂಖ್ಯೆಯನ್ನು ಸದರಿ

ಸ್ಥಳದ ಪಕ್ಕದಲ್ಲಿರುವ **Grace Jubliate Deo Apartment**ನ ನಿವಾಸಿಗಳು ನಮೂದಿಸಿ ನಾಮಫಲಕವನ್ನು ಅಳವಡಿಸಿರುವುದು ತನಿಖೆಯ ಸಮಯದಲ್ಲಿ ತಿಳಿದುಬಂದಿರುತ್ತದೆ.

ಸ್ಥಳ ಪರಿವೀಕ್ಷಣೆಯ ಸಮಯದಲ್ಲಿ ಈ ಬಗ್ಗೆ ಸದರಿ ಅಪಾರ್ಟ್ ಮೆಂಟ್ ನಿವಾಸಿಗಳನ್ನು ವಿಚಾರಿಸಲಾಗಿದ್ದು, ಸದರಿ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ನಾಮಫಲಕವನ್ನು ಅಳವಡಿಸಲಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಈ ರೀತಿಯಾಗಿ ಸಂಚಾರ ಠಾಣೆ ಹಾಗೂ ಬಿಬಿಎಂಪಿ ಆದೇಶ ಮತ್ತು ನಕಲು ಸಂಖ್ಯೆಯನ್ನು ನಾಮಫಲಕದಲ್ಲಿ ನಮೂದಿಸಿರುವುದು ಕಾನೂನು ಬಾಹಿರವಾಗಿರುತ್ತದೆಂದು, ಸದರಿ ನಾಮಫಲಕವನ್ನು ಯಾವುದೇ ಅಧಿಕೃತವಾಗಿ ಪರವಾನಿಗೆಯನ್ನು ಪಡೆಯದೆ ಅನಧಿಕೃತವಾಗಿ ಹಾಗೂ ಕಾನೂನು ಬಾಹಿರವಾಗಿ ಈ ರೀತಿಯಾಗಿ ನಮೂದಿಸಿ ಅಳವಡಿಸಿ, ಸಾರ್ವಜನಿಕರಿಗೆ ತಪ್ಪು ಸಂದೇಶವನ್ನು ನೀಡಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಆರಕ್ಷಕ ಉಪನಿರೀಕ್ಷಕರು, ಪುಲಕೇಶಿನಗರ ಪೊಲೀಸ್ ಠಾಣೆ ರವರಿಗೆ ದಿನಾಂಕ.14.08.2020ರಂದು ದೂರು ನೀಡಿರುವ ಮೇರೆಗೆ ಪ್ರಸ್ತುತ ಸ್ಥಳದಲ್ಲಿರುವ ನಾಮಫಲಕವನ್ನು ತೆಗೆದು ಹಾಕಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಪರಕರಣದಲ್ಲಿ ತಿಳಿಸಿರುವ **'Cars parked illegally under Coxtown Flyover and protected too'** ಎಂದು ನಮೂದಿಸಿರುವ ವಿಷಯವು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಸಂಚಾರ ನಿಯಮದಂತೆ ಕ್ರಮ ಕೈಗೊಳ್ಳಲು ಈಗಾಗಲೇ ದಿನಾಂಕ.14.08.2020 ಆರಕ್ಷಕ ಉಪನಿರೀಕ್ಷಕರು, ಪುಲಕೇಶಿನಗರ ಪೊಲೀಸ್‌ಠಾಣೆ, ಕಾಕ್ಸ್‌ಟೌನ್, ಬೆಂಗಳೂರು ಅವರಿಗೆ ಪತ್ರ ವ್ಯವಹರಿಸಲಾಗಿದೆ.

ಆದುದರಿಂದ ಈ ಮೇಲ್ಕಂಡ ವರದಿಯನ್ನು ತಮ್ಮ ಘನ ಅವಗಾಹನೆಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸುತ್ತಾ, ಪಾಲಿಕೆಯ ವಿರುದ್ಧವಾಗಿ ದಾಖಲಿಸಿಕೊಂಡಿರುವ ಪ್ರಕರಣವನ್ನು ಇತ್ಯರ್ಥಗೊಳಿಸುವಂತೆ ಆಯುಕ್ತರು, ಬಿಬಿಎಂಪಿ, ಬೆಂಗಳೂರು ಅವರು ಆಯೋಗಕ್ಕೆ ವರದಿ ಸಲ್ಲಿಸಿದ್ದಾರೆ.

ಪತ್ರಿಕಾ ಪ್ರಕಟಣೆ ಮತ್ತು ಆಯುಕ್ತರು, ಬಿಬಿಎಂಪಿ ಅವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಪುಲಕೇಶಿನಗರ ಸಂಚಾರಿ ಪೊಲೀಸ್ ಠಾಣಾಧಿಕಾರಿಗಳು ಜಂಟಿಯಾಗಿ ನಾಮಫಲಕ ಹಾಕಿದ್ದ ಸ್ಥಳ ಪರಿಶೀಲಿಸಿದಾಗ, ಬಿಬಿಎಂಪಿ ಹಾಗೂ ಸಂಚಾರ ಠಾಣೆಯಿಂದ ಅಧಿಕೃತವಾಗಿ ಪರವಾನಿಗೆಯನ್ನು ಪಡೆಯದೇ ಕಾನೂನು ಬಾಹಿರವಾಗಿ **Grace Jubliate Deo Apartment** ಅವರು **Traffic Police Station Order No & dated** ಎಂದು ನಮೂದಿಸಿ ನಂತರ ಅಳಿಸಿ ಹಾಕಿ ಪ್ರಸ್ತುತ **by order BBMP, KPA/CVR/EST/112/2018-19** ನಮೂದಿಸಿದ್ದು, ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಪುಲಕೇಶಿನಗರ ಪೊಲೀಸ್ ಸಂಚಾರಿ ಠಾಣೆಗೆ ತಿಳಿಸಿದ ನಂತರ ನಾಮಫಲಕವನ್ನು ತೆಗೆದುಹಾಕಿರುವುದಾಗಿ, ಹಾಗೂ ಈ ಪಾರ್ಕಿಂಗ್ ವಿಷಯವು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುವುದಾಗಿ ವರದಿ ಮಾಡಿರುವುದರಿಂದ ಈ ಬಗ್ಗೆ ಪರಿಶೀಲಿಸಿ, ದೂರುಗಳಿಗೆ ಅವಕಾಶ ನೀಡದಂತೆ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಅನುಸರಣಾ ವರದಿ ಸಲ್ಲಿಸುವಂತೆ ಪೊಲೀಸ್ ಇನ್ಸ್‌ಪೆಕ್ಟರ್, ಪುಲಕೇಶಿನಗರ ಸಂಚಾರಿ ಪೊಲೀಸ್‌ಠಾಣೆ, ಪುಲಕೇಶಿನಗರ, ಬೆಂಗಳೂರು ಅವರಿಗೆ ಸೂಚಿಸಿ, ಆಯೋಗದಲ್ಲಿಯ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

Sd/-
(ಆರ್.ಕೆ.ದತ್ತ)
ಸದಸ್ಯರು

ಮೇಲ್ಕಂಡ ಆದೇಶದಂತೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿ, ಮುಕ್ತಾಯಗೊಳಿಸಲಾಗಿದೆ ಹಾಗೂ ಈ ಆದೇಶದ ಪತ್ರವನ್ನು ತಮ್ಮ ಮಾಹಿತಿಗಾಗಿ ಕಳುಹಿಸಲಾಗಿದೆ ಎಂದು ತಮಗೆ ಸೂಚಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
2/9/20
ಸಹಾಯಕ ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

ಪ್ರತಿಯನ್ನು:- **Editor, The Bangalore Mirror News Paper, Banglaore** –ಮಾಹಿತಿಗಾಗಿ